









ಪರಂಪರೆಯನ್ನು ಸಾಹಿತ್ಯದ ಮೂಲಕ ಗಟ್ಟಿಗೊಳಿಸುತ್ತಾರೆ. ಕೀರ್ತನೆ, ಉಗಾಭೋಗ ಮತ್ತು ಸುಳಾದಿಗಳಲ್ಲಿ ನಿತ್ಯ ಬದುಕಿನ ತಲ್ಲಣ, ಜಾತ್ಯತೀತ ಮನೋಭಾವ, ಸಾಮಾಜಿಕ ಎಚ್ಚರ, ಮನುಷ್ಯ ಲೋಕದ ಘನತೆ, ನೈತಿಕ ಮೌಲ್ಯ, ಜೀವಪರ ಧೋರಣೆ, ದೇಸೀಯತೆಯ ಪರಿಕಲ್ಪನೆಗಳನ್ನು ತೆರೆದಿಟ್ಟಿದ್ದಾರೆ.

ಕನಕದಾಸರ ಪ್ರಮುಖ ಕೃತಿಗಳಾದ 'ಮೋಹನ ತರಂಗಿಣಿ', 'ನಳಚರಿತೆ', 'ಹರಿಭಕ್ತಿಸಾರ' ಮತ್ತು 'ರಾಮಧಾನ್ಯ ಚರಿತೆ'ಗಳು ಈ ಹೊತ್ತಿಗೂ ಪ್ರಸ್ತುತವೇ. ನೆಲಮೂಲ ಸಂಸ್ಕೃತಿಯ ಅನಾವರಣ, ಲೋಕದೃಷ್ಟಿ, ಕೃಷ್ಣನ ಬಗೆಗಿನ ಆರಾಧನಾ ಮನೋಭಾವ, ಕರ್ಮಠತನದ ನಿರಾಕರಣೆ, ನಿಸರ್ಗ ಬದುಕಿನ ಬಗೆಗಿನ ಪ್ರೀತಿ, ವೈರಾಗ್ಯ ಭಾವ –ಇವೆಲ್ಲವುಗಳನ್ನು ರೂಪಕಗಳ ಮೂಲಕ ದುಡಿಸಿಕೊಂಡಿದ್ದಾರೆ. ಒಳಗಣ್ಣನ್ನು ತೆರೆಸುತ್ತಲೇ, ವಿವೇಕವನ್ನು ವಿಸ್ತರಿಸುವ ಸಾಹಿತ್ಯವದು.

ಕನಕದಾಸರ ಬದುಕು ಮತ್ತು ಸಾಹಿತ್ಯದ ಅನೇಕ ಒಳನೋಟಗಳನ್ನು ಬಿಂಬಿಸುವ ಕಲಾಕೃತಿಗಳು ಈಚೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿರುವ 'ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ'ದ ಕಟ್ಟಡದಲ್ಲಿ ಕಂಡವು. ಈ ಕೇಂದ್ರದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣ ಅವರ ಆಸಕ್ತಿ ಮತ್ತು ಒತ್ತಾಸೆಯಿಂದಾಗಿ ಅವು ಕಟ್ಟಡದ ಒಳಗಡೆ ರಾರಾಜಿಸುತ್ತಿವೆ.

ಹಿರಿಯ ಕಲಾವಿದರಾದ ವಿ.ಜಿ. ಅಂದಾನಿ, ಕರಿಯಪ್ಪ ಹೆಂಚಿನಮನಿ, ಕೃಷ್ಣ ರಾಯಚೂರು, ನಿರ್ಮಲ ನಿಲಾಂಬಿಕ, ಎಂ.ಎಸ್. ನಾಗರಾಜ, ಎನ್. ನಿಂಗಪ್ಪ, ಮಹೇಶ್ ರಾಹುಲ್, ಸ್ವಪ್ನ ಕೆ., ಎಂ.ಎಸ್. ಕಾರಟಗಿ ಮತ್ತು ನವೀನ್ ಪತ್ತಾರ್ ಮುಂತಾದವರು ಕನಕದಾಸರ ಬದುಕಿನ ಪ್ರಸಂಗಗಳು, ಅವರ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡ ಚಿಂತನೆಗಳನ್ನು ಚಿತ್ರಗಳ ಮೂಲಕ ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದಾರೆ. ಕಲಾವಿದರ ಒಂದೊಂದು ಕಲಾಕೃತಿಯೂ ಭಿನ್ನವಾಗಿದೆ. ಕನಕದಾಸರ ಒಳನೋಟ, ದೂರದೃಷ್ಟಿ ಕಲಾಕೃತಿಗಳ ಉದ್ದಕ್ಕೂ ಹಾಸುಹೊಕ್ಕಾಗಿದೆ.

ಪ್ರತಿಕ್ರಿಯಿಸಿ: **feedback@sudha.co.in**